10

# ವಿಶ್ವಾಸದ ಜ್ಞಾನ (3:13-18)

ಮನುಷ್ಯನ ಜ್ಞಾನವು ಅಭಿವೃದ್ಧಿಯಾಗುತ್ತಿರುವ ವಿಷಯವನ್ನು ಗಮನಿಸಿರಿ! ಹಿಂದೆ ಜೀವಿಸಿದ ವಿಜ್ಞಾನಿಗಳಲ್ಲಿ ಶೇಕಡ ೯೦/ರಷ್ಟು ವಿಜ್ಞಾನಿಗಳು ಇಂದಿಗೂ ಜೀವಿಸುತ್ತಿದ್ದು ಮತ್ತು ಈ ಲೋಕದ ಜ್ಞಾನವು ಪ್ರತಿ ಹತ್ತು ವರ್ಷಗಳಿಗೊಮ್ಮೆ ದ್ವಿಗುಣಗೊಳ್ಳುತ್ತಿದೆ. ನೀವು ನಿಮ್ಮ ಜೀವಿತದಲ್ಲಿ ಇದೆಲ್ಲವನ್ನು ಸಾಧಾರಣವಾಗಿ ನೋಡುತ್ತಿರುವಿರಿ. ಇದು ಎಂಥ ವೇಗವಾಗಿ ಬೆಳೆಯುತ್ತಿದೆ ಎಂದು ಆಲೋಚಿಸಿರಿ. ವಿಜ್ಞಾನಿಗಳು ತಾವು ಗಳಿಸಿರುವ ಮತ್ತು ಪಡೆದುಕೊಂಡಿರುವ ಜ್ಞಾನವನ್ನು ದಾಸ್ತನು ಮಾಡಿಡಲು ಉತ್ತಮವಾದ ಯೋಜನೆಯನ್ನು ಮಾಡುವವರಾಗಿದ್ದಾರೆ.

ಆ ರೀತಿಯಾದ ಜ್ಞಾನವನ್ನು ಕೂಡಿಸಿಡುವಂಥ ಜ್ಞಾನವು ಮನುಷ್ಯನು ತಾನು, ವಿವೇಕಿ ಯಾಗಿದ್ದಾನೆ ಎಂದು ತಿಳಿದುಕೊಂಡಿದ್ದಾನೆ. ಈ ರೀತಿಯಾದ ಆಲೋಚನೆಯ ಮನುಷ್ಯನು ವಿರೋಧಭಾಸವುಳ್ಳವನು ಮತ್ತು ಅಹಂಕಾರಿಯೂ ಆಗಿದ್ದಾನೆ. ಈ ತಿಳುವಳಿಕೆಯ ಮೂಲಕ ಅಂತರಾಷ್ಟ್ರೀಯ ಅಣು ಶಕ್ತಿಯ ಯುದ್ಧ ಸಾಮಾಗ್ರಿಗಳನ್ನು ಕಂಡು ಹಿಡಿದಿದ್ದಾರೆ, ಇದರಿಂದ ಕಾರ್ಯತಂತ್ರದ ಅಸೂಯೆ, ಹೋರಾಟ ಮತ್ತು ವೈಯಕ್ತಿಕವಾದ ಅತೃಪ್ತಿಯು ಎಲ್ಲಾ ಕಡೆಗಳಲ್ಲಿ ಉಂಟಾಗಿವೆ. ಆದುದರಿಂದ ಸೃಷ್ಟಿಕರ್ತನ ಬದಲಾಗಿ ಸೃಷ್ಟಿಯನ್ನೇ ಜನರು ಸೇವಿ ಸುತ್ತಿದ್ದಾರೆ, ಅವರು ವಿಚಾರ ಮಾಡಿ ಫಲಕಾಣಲಿಲ್ಲ: ಅವನು ತನ್ನ ಸ್ವಂತ ಜ್ಞಾನವನ್ನೇ ಸೇವಿ ಸುತ್ತಿದ್ದಾನೆ (ರೋಮಾಪುರ 1:21, 22).

"ಜ್ಞಾನ" ಮತ್ತು "ವಿವೇಕ" ಒಂದೇ ಆಗಿರುವದಿಲ್ಲ ಸಂಗತಿಗಳನ್ನು ಸಂಗ್ರಹಿಸುವುದು ಜ್ಞಾನವಾಗಿರುತ್ತದೆ. ನಾವು ಸಂಗ್ರಹಿಸಿರುವ ಜ್ಞಾನವನ್ನು ಉಪಯೋಗಿಸುವುದು ವಿವೇಕವಾ ಗಿರುತ್ತದೆ. ವಿವೇಕವನ್ನು ಜ್ಞಾನವು ಮೀರಿಸಿರುವುದು ಪ್ರಪಂಚದ ದೊಡ್ಡ ಸಮಸ್ಯೆಯಾಗಿರುತ್ತದೆ. ಮಾಹಿತಿ ಜ್ಞಾನ, ಆಯುದಗಳ ಮತ್ತು ತಂತ್ರಜ್ಞಾನಗಳ ಕುರಿತಾಗಿಯೇ ನಾವು ವಿವರಿಸುತ್ತೇವೆ. ವೈಯಕ್ತಿಕವಾಗಿ ಇವುಗಳನ್ನು ಗಮನಿಸಿ, ಇದನ್ನು ಕಂಡು ಹಿಡಿದವನು ತನ್ನ ಜೀವಿತವನ್ನು ಸಂಬಾಳಿಸುವುದು ಅಸಾಧ್ಯವಾಗಿದೆಯೆಂದು ನಾವು ತಮಾಷೆಯನ್ನು ಮಾಡಿದ್ದೇವೆ.

ಈಗ ಯಾಕೋಬನು, ಹೊಸದಾದ ಆಲೋಚನೆಯಿಂದ ನಮ್ಮನ್ನು ಎದುರಿಸಿದ್ದಾನೆ. ಜ್ಞಾನ ಮತ್ತು ವಿವೇಕದಲ್ಲಿ ಮಾತ್ರ ವ್ಯತ್ಯಾಸಗಳಿರದೆ, ಎರಡು ವಿಧವಾದ ವಿವೇಕಗಳಿವೆ. ಮೇಲಣಿಂದ ಬಂದಿರುವ ವಿವೇಕ (ನಂಬಿಕೆಯ ತಿಳುವಳಿಕೆ) ಕೆಳಗಿನಿಂದ ಬಂದ ವಿವೇಕ. ಯಾಕೋಬ 3:13-18ರ, ನಮ್ಮ ಪಾಠದಲ್ಲಿ, ಯಾಕೋಬನು ಈ ಎರಡರ ನಡುವೆ ಇರುವ ವ್ಯತ್ಯಾಸವನ್ನು ತಿಳಿಯಪಡಿಸಿದ್ದಾನೆ. ಪ್ರೇರಣೆ ಹೊಂದಿದ ಬರವಣಿಗೆಗಾರರು ವ್ಯತ್ಯಾಸಗಳನ್ನು ತೋರಿಸುವುದು ತಿಳಿಯಪಡಿಸಿದ್ದಾನೆ ಪ್ರೇರಣೆ ಹೊಂದಿದ ಬರವಣಿಗೆಗಾರರು ವ್ಯತ್ಯಾಸಗಳನ್ನು ತೋರಿಸುವುದು ಸರ್ವಸಾಧಾರಣವಾಗಿತ್ತು: 1ನೇ ಕೀರ್ತನೆಯ ದೈವಭಕ್ತಿಯ ಮತ್ತು ದೈವ ಭಕ್ತಿ ಇಲ್ಲದ ಜೀವಿತದ ವ್ಯತ್ಯಾಸವನ್ನು ತೋರಿಸುತ್ತಾನೆ. ಪೌಲನು ಶಾರೀರಿಕ ಕ್ರಿಯೆಯ ಮತ್ತು ದೇವರಾತ್ಮನ ಫಲಗಳ ನಡುವೆ ಇರುವ ವ್ಯತ್ಯಾಸವನ್ನು ತೋರಿಸುತ್ತಾನೆ. ಯೇಸುವು ಅಗಲ ಮಾರ್ಗ ಇಕ್ಕಾಟ್ಟಾದ ನಡುವೆ ಇರುವ ವ್ಯತ್ಯಾಸವನ್ನು ತೋರಿದ್ದಾನೆ, ಹಾಗೂ ಬಂಡೆಯ ಮೇಲೆ ಕಟ್ಟಿದ ಮನೆ ಮತ್ತು ಉಸುಬಿನ ಮೇಲೆ ಕಟ್ಟಿದ ಮನೆಯ ಕುರಿತಾಗಿಯೂ ತಿಳಿಸಿದ್ದಾನೆ. ಸಹಜವಾಗಿ ಇವೆಲ್ಲವು ಎರಡು ವಿಧವಾದ ಮಾರ್ಗಗಳ ಕುರಿತಾದ ವ್ಯತ್ಯಾಸಗಳನ್ನು ತೋರುತ್ತದೆ. ಯಾಕೋಬನು, ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಂಡು ಜೀವಿತದಲ್ಲಿ

ತಪ್ಪಾದ ವಿವೇಕವನ್ನು ತೋರುತ್ತಿದ್ದವರಿಗೆ ಮಾತನಾಡುತ್ತಿದ್ದಾನೆ.

## ವಿವೇಕವುಳ್ಳ ಮನುಷ್ಯನು (3:13)

ಯಾಕೋಬನು ಕೇಳುವ ಪ್ರಶ್ನೆ, "ನಿಮ್ಮಲ್ಲಿ ಜ್ಞಾನಿಯೂ ಬುದ್ಧಿವಂತನೂ ಯಾರು? ..." (ಯಾಕೋಬ 3:13ಎ), ನಾವೆಲ್ಲರು ಉತ್ತರ ಹೇಳಬಹುದು. ತಾಪತ್ರಯದ ಸಮಯದಲ್ಲಿ, ಸಭೆಗಳಲ್ಲಿ ಜನರು ಯಾರ ಕಡೆಗೆ ತಿರುಗುತ್ತಾರೋ ಅಂಥವರೆ. ಅವನಲ್ಲಿರುವ ವಿಶೇಷ ಜ್ಞಾನದ ನಿಮಿತ್ತ ಅವರು ಅವನ ಬಳಿಗೆ ಬಾರದೆ, ಒಂದು ವೇಳೆ ಅವನು ವಿವೇಕಿಯಾಗಿರಬಹುದು ಆದರೆ ಅವನಲ್ಲಿರುವ ಬುದ್ಧಿವಂತಿಕೆ ಮತ್ತು ತಿಳುವಳಿಕೆಯಿಂದಲೇ. ಉತ್ತರ ಹೇಳುವದಕ್ಕೆ ಸಾಧ್ಯವಿರುವ ಪ್ರಶ್ನೆಯನ್ನೇ ಯಾಕೋಬನು ಕೇಳುತ್ತಿದ್ದಾನೆ. ನನ್ನ ಸಭೆಯಿರುವ, ಅರ್ಕನ್‌ಸಾಸ್‌ನ, ಸ್ಪ್ರಿಂಗ್‌ಡೇಲ್‌ನ ಸಭಿಕರಲ್ಲಿ ಆರುಜನ ಯೌವನಸ್ಥರಿಗೆ ಸಂಪೂರ್ಣವದಿಯ ಸೇವೆಯ ಕುರಿತು ತರಬೇತಿಯನ್ನೂ ನೀಡುತ್ತಿದೆ. ಸುಮಾರು 12 ವರ್ಷಗಳ ಕಾಲ ತರಬೇತಿ ನೀಡಿದ್ದೆ. ಇದಕ್ಕೆ ಕಾರಣನಾದ ಒಬ್ಬ ವ್ಯಕ್ತಿ ಜೇಮ್ಸ್, ಎಲ್. ನೀಲ್ ಎಂಬುದಾಗಿ ಅವರು ಅರವತ್ತು ವರ್ಷಗಳ ಕಾಲ ಸಭಾ ಹಿರಿಯರಾಗಿ ಕಾರ್ಯ ನಿರ್ವಹಿಸಿದ್ದರು. ಅವರು ಯೌವನಸ್ಥರಿಗೆ, ವಾಕ್ಯದ ಬಾಯಿಪಾಠ ಮಾಡಿಸಿದ್ಧರು. ದೈವೀಕ ಸಂದೇಶಗಳನ್ನು ನೀಡಿದ್ದರು, ಮತ್ತು ಇನ್ನೂ ಅನೇಕ ಡಜನ್‌ಗಟ್ಟಲೆ ಕಾರ್ಯಗಳನ್ನು ಮಾಡಿದ್ದರು. ಸಂತತಿಗಳು, ಅವರ ಬುದ್ಧಿವಂತಿಕೆಗೆ ಮತ್ತು ತಿಳುವಳಿಕೆಗೆಗಾಗಿ ಅವರನ್ನು ನೋಡುತ್ತಿದ್ದರು.

ವಿವೇಕಿಯ, ಸಂಕೇತವೇನೆಂದರೆ, "ಅವನ ಯೋಗ್ಯವಾದ ನಡೆ" ಮತ್ತು ಜ್ಞಾನದ ಲಕ್ಷಣವಾಗಿರುವ "ಶಾಂತಗುಣದ ಫಲವಾಗಿರತ್ತದೆ" (3:13ಬಿ). ಇನ್ನೊಂದು ಮಾತಿನಲ್ಲಿ, ಯಾವ ಮನುಷ್ಯನು ವಿವೇಕವನ್ನು ಮೇಲಿನಿಂದ ಹೊಂದಿರುತ್ತಾನೋ ಅವನು ತನ್ನ ಬುದ್ಧಿ ವಂತಿಕೆಯ ಬಗ್ಗೆ ಹೇಳಿಕೊಳ್ಳುವದಿಲ್ಲ, ಆದರೆ ಅದು ಅವನ ಮಾತುಗಳಲ್ಲಿ ಎದ್ದು ಕಾಣುತ್ತದೆ, ಅವನ ಆಲಿಸುವಿಕೆಯಲ್ಲಿ, ಮತ್ತು ತಿಳುವಳಿಕೆಯೂ ಎದ್ದು ಕಾಣುತ್ತದೆ. *ಅದ್ಭುತವಾದ ಜೀವನ* ಎಂಬ ಕ್ರಿಸ್‌ಮಸ್ ಚಲನ ಚಿತ್ರದಲ್ಲಿ, ಜಿಮ್ಮಿ ಸ್ಟಿವಾರ್ಟ್‌ರವರ ಅದ್ಭುತವಾದ ನಟನೆ ಇದೆ. ಅದು ಕನಿಕರವಿಲ್ಲದ ಪಟ್ಟಣದಲ್ಲಿದ್ದ, ಕನಿಕರವಿಲ್ಲದ ವ್ಯಕ್ತಿಯ ಕುರಿತಾಗಿ, ಅವನು ಯಾವ ಅರ್ಥವಿಲ್ಲದ ವ್ಯಾಪಾರವನ್ನು ಮಾಡಿ ತನ್ನನ್ನು ಶ್ರೇಷ್ಟ ವ್ಯಕ್ತಿ ಅನ್ನಿಸಿಕೊಳ್ಳಬೇಕು ಎಂದು ಆಶೆವುಳ್ಳವನಾಗಿದ್ದನು. ಅವನು ಪ್ರತಿಸಲ ಶ್ರೇಷ್ಟ ವ್ಯಕ್ತಿಯಾದನು ಅನ್ನುವ ಕ್ಷಣದಲ್ಲಿ, ಮತ್ಯಾರಿಗೋ ಅವನ ಅಗತ್ಯವಿರುತ್ತದೆ. ಆ ಚಲನ ಚಿತ್ರವು ಮುಂದುವರಿಯುವಾಗ, ಇತರರು, ಇನ್ನಾರೋ ಆಗಿದ್ದರು ಆದರೆ ಇವನನ್ನು ಹೊರತುಪಡಿಸಿ, ಅವನು ಚಿಕ್ಕ ಕಾರ್ಯಗಳನ್ನು ಮಾಡುತ್ತಲೇ ಇದ್ದನು, ಮತ್ತು ತನ್ನ ಜೀವನವು ವ್ಯರ್ಥವೇ ಎಂದು ತಿಳಿದನು. ನಂತರ ಅವನು ಬೇಸರಪಟ್ಟು ಆತ್ಮಹತ್ಯೆಗೆ ಮುಂದಾಗುವಾಗ, ದೇವದೂತನು ಅವನಿಗೆ ಕಾಣಿಸಿಕೊಂಡು ಅವನಿಲ್ಲದ ಸಮುದಾಯವು ಯಾವ ರೀತಿ ಇರುತ್ತದೆ ಎಂದು ತೋರಿಸಿದನು. ಅವನು ಆ ಊಹಾ ಚಿತ್ರಣವನ್ನು ನೋಡಿದಾಗ, ಅವನ ಗಮನಕ್ಕೆ ಬಾರದ ಪ್ರೀತಿಯ ಕ್ರಿಯೆಗಳು ಆ ಸಮುದಾಯದ ನಡುವೆ ಬದಲಾವಣೆಯನ್ನು ಮತ್ತು ಕ್ರಾಂತಿಯನ್ನು ಉಂಟು ಮಾಡಿತ್ತು. ಒಬ್ಬನ ಜೀವನ ಯಾರ ಗಮನಕ್ಕೂ ಬಾರದೆ ಇದ್ದರೂ, ಅನೇಕರ ಜೀವನದಲ್ಲಿ ಪ್ರಭಾವವನ್ನು ಬೀರಿರುತ್ತದೆ! ಈ ವಿಷಯವನ್ನೇ ಯಕೋಬನು ಮಾತನಾಡುತ್ತಿದ್ದಾನೆ. ಅವನ ಪ್ರಾಯೋಗಿ ಕತೆಯಲ್ಲಿ ನಾವು ತಿಳುವಳಿಕೆಯ ನಂಬಿಕೆಯ ಜೀವನವನ್ನು ಅಳವಡಿಸಿಕೊಳ್ಳಬೇಕು ಎಂದು ಬೇಡುತ್ತಾನೆ.

## ಭೂಸಂಬಂಧವಾದ ಜ್ಞಾನ (3:14-16)

ಮುಂದೆ ಹೇಳಿದ ಪ್ರಕಾರ, ಭೂಸಂಬಂಧವಾದ ಜ್ಞಾನವನ್ನು ಪ್ರದರ್ಶಿಸುವ "ಸಹೋದ ರರ" ಬಗ್ಗೆ ಯಾಕೋಬನು ಚಿಂತಿಸುತ್ತಿದ್ದಾನೆ, "ಒಬ್ಬನು ಭೂಸಂಬಂಧವಾದ ಜ್ಞಾನವನ್ನು

ಪ್ರದರ್ಶಿಸುತ್ತಿದ್ದಾನೆಂದು ನೀವು ಹೇಗೆ ಹೇಳಬಲ್ಲಿರಿ?'' ಎಂದು ಕೆಲವರು ಕೇಳಬಹುದು ಯಾಕೋಬನು ಹೀಗೆ ಹೇಳುತ್ತಾನೆ. "ತೀಕ್ಷ್ಣವಾದ ಮತ್ಸರವೂ ಪಕ್ಷಬೇಧವೂ ನಿಮ್ಮ ಹೃದಯದೊಳಗೆ ಇರುವಲ್ಲಿ ..." (3:14). ಯಾಕೋಬನು ವಿಷಯದ ಕೇಂದ್ರ ಭಾಗವನ್ನು ಮುರಿದು ಸತ್ಯದ ಕಡೆಗೆ ತಿರುಗಿಸುತ್ತಾನೆ. ಈ ಭೂಸಂಬಂಧವಾದ ಜ್ಞಾನವೂ ಅದರ ಮಟ್ಟಿಗೆ ಅದೇ ಸ್ಪಷ್ಟವಾಗಿ ತೋರಿಸಿಕೊಳ್ಳುತ್ತದೆ. ಮತ್ಸರವೂ ಪಕ್ಷಬೇಧವೂ ದೇವರಿಗೆ ಸಮರ್ಪಿತ ವಾದ ಜೀವನದ ಫಲಗಳಲ್ಲ, ನಿಜವಾಗಿಯೂ ಅವು ಭೂಸಂಬಂಧವಾದವು, ಅಶಾಸ್ತ್ರಿಯ ವಾದವು, ಸೈತಾನನಿಂದಾದವು. ದೈವೀಕವಲ್ಲದ ಈ ಲಕ್ಷಣಗಳನ್ನು ತೆಗೆದು ಹಾಕಲು ಮುರಿದ ಹೃದಯದಿಂದಲೂ ಮತ್ತು ನೊಂದ ಆತ್ಮದಿಂದಲೂ ಮಾತ್ರವೇ ಸಾಧ್ಯವೆಂದು ಯಾಕೋಬನು ಹೇಳುತ್ತಾನೆ. ಹಳೆಯ ಇಲ್ಲದ ನೆಪಗಳನ್ನು ದೇವರು ಅಂಗೀಕರಿಸುವದಿಲ್ಲ. "ನಾನೀರುವುದು ಹಾಗೆಯೇ; ಅದನ್ನು ನೀನು ಅಂಗೀಕರಿಸಬೇಕು ಅಲ್ಲದೆ ಬಿಟ್ಟು ಬಿಡಬೇಕು" ಅಥವಾ, "ನಾನು ಓರಟುದವನಲ್ಲ ಅಥವಾ ವಿಮರ್ಶಾತ್ಮಕನಲ್ಲ; ನಾನು ಕೇವಲ ನಿರ್ಭೀಡೆಯ ಮತ್ತು ನಿಷ್ಕಪಟ ಮಾತಿನವನು" ಎಂದು ನಾನು ಹೇಳಿದರೆ ಯಾಕೋಬನು ಒಪ್ಪಲಾರನು ನಮ್ಮ ಜೀವಿತದಲ್ಲಿ ಮಾಡಿದ ತಪ್ಪುಗಳನ್ನು ಒಪ್ಪಿಕೊಳ್ಳಲು ಕಲಿಯುವವರೆಗೆ ನಾವು ಭೂ ಸಂಬಂಧವಾದ ಜ್ಞಾನದ ಯುಕ್ತಿಯಿಂದ ನಡೆದುಕೊಳ್ಳುತ್ತೇವೆ. ದೇವರ ಜ್ಞಾನವು ಕ್ರಿಯೆ ಮಾಡುತ್ತಿರುವಾಗ ದೇವರೇ ಮಹಿಮೆಪಡಿಸಲ್ಪಡಬೇಕೆಂಬ ಕೋರಿಕೆಯು ವಿನಯ ಬಾವನೆಯೂ ಕಾಣಿಸಿಕೊಳ್ಳುತ್ತದೆ.

ಭೂಸಂಬಂಧವಾದ ಜ್ಞಾನವೂ ದುಃಖಕರವಾದ ಪರಿಣಾಮಗಳಿಗೆ ನಡಿಸುತ್ತದೆ: "ಮತ್ಸರವೂ ಪಕ್ಷಬೇಧವೂ ಇರುವ ಕಡೆ ಗಲಿಬಿಲಿಯೂ ಸಕಲ ನೀಚಕೃತ್ಯಗಳೂ ಇರುವವು" (3:16). ಜನರನ್ನು ಒಂದು ಗೂಡಿಸುವದರ ಬದಲಾಗಿ ಭೂಸಂಬಂಧವಾದ ಜ್ಞಾನವು ಜನರನ್ನು ಬೇರ್ಪಡಿಸುತ್ತದೆ. ಹಲವು ವರ್ಷಗಳಿಂದ ಮಾನವನ ಮನಸ್ಸಿನ ಬಲವನ್ನು ಮಾನವ ಜಾತಿಯು ದೃಢಪಡಿಸುತ್ತದೆ. ಪ್ರಪಂಚದ ಸಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಗಳನ್ನು ನೋಡುವಾಗ ಭೂಸಂಬಂಧವಾದ ಜ್ಞಾನಕ್ಕೆ ಬದಲಾಗಿ ಮತ್ತೊಂದು ಇದೆ ಎಂಬುದು ಸಂತೋಷವನ್ನುಂಟು ಮಾಡುತ್ತದೆ.

## ವಿಶ್ವಾಸದ ಜ್ಞಾನ (3:17, 18)

ಅದ್ಭುತವಾದ ತಿಳುವಳಿಕೆಯು ದೇವರಿಂದಲೇ ಬರುತ್ತದೆ, ಆದು ನಿಸ್ಸಂಶಯ ದೇವರು ವಿವೇಕವನ್ನು ದಯಪಾಲಿಸುವನು ಎಂದು ಯಾಕೋಬನು ಈಗಾಗಲೇ ತಿಳಿಸಿದ್ದಾನೆ (1:5) ನಾವು ಅದನ್ನು ದೀನಭಾವದಿಂದಲೂ, ಮತ್ತು ಕೃತಜ್ಞತೆಯಿಂದಲೂ ಸ್ವೀಕರಿಸಬೇಕು.

ಆ ವಿವೇಕವು ದೇವರಿಂದಲೇ ಬಂದಿರುವುದು ಎಂಬುದಕ್ಕೆ ಯಾಕೋಬನು ಏಳು ಗುಣಗಳನ್ನು ತೋರಿಸಿದ್ದಾನೆ.

*ನಿರ್ಮಲವಾದದ್ದು.* "ನಿರ್ಮಲವಾದ" ದೇವರನ್ನೇ ನಾವು ಸೇವಿಸುತ್ತೇವೆ, ಆತನು ನೀಡುವಂಥ ವಿವೇಕದಲ್ಲಿ ಅಶುದ್ಧತೆಯು ಮಿಶ್ರಣವಾಗಿರುವದಿಲ್ಲ. ವೈಯಕ್ತಿಕವಾಗಿ ನಂಬಿಕೆಯ ವಿವೇಕವನ್ನು ಹೊಂದಿರುವವನು, ಸ್ವಾರ್ಥಚಿಂತಕನು ಮತ್ತು ದುರಾಶೆವುಳ್ಳವನೂ ಆಗಿರುವದಿಲ್ಲ. ನಿರ್ಮಲವಾಗಿರುವವನು ಅನೀತಿಯ ಕಾರ್ಯಗಳನ್ನು ಮಾಡಲಾರನು.

*ಸಮಾಧಾನ.* ಪ್ರಿಯನು ನಂಬಿಕೆಯ ವಿವೇಕವು ಸರಿಯಾದ ಸಂಬಂಧವನ್ನು ನಿರ್ಮಿಸಿ, ಪರಸ್ಪರರನ್ನೂ ಒಂದುಗೂಡಿಸುತ್ತಾನೆ. ನಂಬಿಕೆಯ ವಿವೇಕವು ಪ್ರೀತಿಯ ಹೃದಯವನ್ನು ನೀಡಿ ಸಮಾದಾನದ ಕ್ರಿಯೆಯನ್ನು ಪ್ರಚುರಪಡಿಸುತ್ತದೆ. ದೇವರಿಂದುಟಾಗುವ ವಿವೇಕವು ಅನಗತ್ಯವಾದ ಗೊಂದಲದಿಂದಲೂ ಮತ್ತು "ಜಗಳದಿಂದಲೂ" ಕೂಡಿರುವದಿಲ್ಲ.

*ಪರಾಸಕ್ತಿಯುಳ್ಳದ್ದು.* ಇದರ ಗ್ರೀಕ್‌ಪದಕ್ಕೆ ಸಮಾನವಾದ ಆಂಗ್ಲಪದವು ಇರುವದಿಲ್ಲ. ಕಾರ್ಲ್ ಸ್ಯಾಂಡ್‌ಬರ್ಗ್ ಒಂದು ಸಾರಿ ಅಬ್ರಹಾಮ್ ಲಿಂಕನ್ನರನ್ನು "ಜರತಾರಿಯ ಉಕ್ಕು" ಎಂಬುದಾಗಿ ವಿಶ್ಲೇಸಿದರು. ಒಂದು ವೇಳೆ ಅದು "ಪರಾಸಕ್ತಿ" ಎಂಬುದಕ್ಕೆ ಸರಿಯಾಗಬಹುದು.

ವ್ಯಭಿಚಾರಿಣಿಯಾದ ಸ್ತ್ರೀಯನ್ನು ಯೇಸು ಸಂಧಿಸಿದಾಗ ತೋರಿದ ಸದ್ಗುಣ ಮತ್ತು ಕ್ಷಮಾಪಣೆಗೆ (ಯೋಹಾನ 8) ಸಮನಾದ ಪದವಾಗಿರುತ್ತದೆ.

*ಅಧೀನತೆ.* ಒಬ್ಬನು ಎಲ್ಲಾ ವಿಧವಾದ ಅಧೀನತೆಯ ಬಗ್ಗೆ ಮಾತನಾಡಿದರೂ, ಯಾಕೋಬನು ತಿಳಿಸಿದ ಅರ್ಥವನ್ನು ತಿಳಿಯದಿರಬಹುದು. ಅದನ್ನು ಉಪಯೋಗಿಸಿದಂಥ ಸಂದರ್ಭದಿಂದ ತೆಗೆದುಕೊಂಡರೆ ನಿಜವಾದ ವಿವೇಕಿಯಾದ ಮನುಷ್ಯನು, ನಿತ್ಯವಾಗಿಯೂ ದೇವರಿಗೆ ವಿದೇಯನಾಗುವದಕ್ಕೆ ಒಳಪಡುವನು.

*ಕನಿಕರದಿಂದ ತುಂಬಿದವನು ಮತ್ತು ಉತ್ತಮ ಫಲ.* ಈ ಎರಡು ಹೇಳಿಕೆಗಳು ಒಟ್ಟಾಗಿದ್ದು ಮತ್ತು ವಚನ 16ರಲ್ಲಿರುವ "ಸಕಲ ವಿಧ ನೀಚ ಕೃತ್ಯಗಳಿಗೆ" ವ್ಯತಿರಿಕ್ತವಾಗಿರುತ್ತದೆ. "ಕರುಣೆ" ಅಕ್ಷರಶಃ ಅನುಕಂಪ ಎಂಬ ಅರ್ಥವುಳ್ಳದ್ದು ಅದು "ಉತ್ತಮವಾದ ಫಲಕ್ಕೆ" ಸಮಾನವಾದದ್ದು ಯಾಕಂದರೆ ಕ್ರೈಸ್ತರ ಅನುಕಂಪವು ಕೇವಲ ಭಾವೋದ್ವೇಗವಲ್ಲ. ಅಗತ್ಯವುಳ್ಳವನಿಗೆ ಸಹಾಯ ಮಾಡಲಾರದ ಹೊರತು, ಒಬ್ಬ ಕ್ರೈಸ್ತನು ತಾನು ಅನುಕಂಪ ಹೊಂದಿದ್ದೇನೆ ಎನ್ನುವದು ಸಾಧ್ಯವಿಲ್ಲ.

*ಪಕ್ಷಪಾತಿಯಾಗಿರಬಾರದು.* ಈ ಪದದ ಅನುವಾದವು ಕಷ್ಟಕರವಾದದ್ದಾಗಿರುತ್ತದೆ. ಯಾಕಂದರೆ ಗ್ರೀಕ್ ಹೊಸ ಒಡಂಬಡಿಕೆಯ ಈ ಭಾಗದಲ್ಲಿ ಮಾತ್ರ ಈ ಪದವನ್ನು ಉಪಯೋಗಿಸಲಾಗಿದೆ. ವಿವರಣೆಕಾರರು ಇದರ ಕುರಿತು "ನಿರ್ಣಾಯಕ" ಪದವೆಂದು ಅನು ವಾದಿಸಿದ್ದಾರೆ. ಈ ಹಿನ್ನಲೆಯಲ್ಲಿ ನಂಬಿಕೆಯುಂದಾಟಾಗುವ ವಿವೇಕವು ದೃಢವಾಗಿರುತ್ತದೆ. ಮತ್ತು ಏಕರೂಪವಾದ ನಂಬಿಕೆಯನ್ನು ಮತ್ತು ಕ್ರಿಯೆಯನ್ನು ತೋರಿಸುತ್ತದೆ.

*ಯಥಾರ್ಥತೆ.* ಸತ್ಯವಾದ ವಿವೇಕವು ಯಥಾರ್ಥವಾಗಿರುತ್ತದೆ. ಮತ್ತು ತಾನು ಏನಾಗಿರುವದಿಲ್ಲವೋ ಅದರಂತೆ ನಟಿಸುವದಿಲ್ಲ. ನಮ್ಮ ಸಂಬಂಧಗಳಲ್ಲಿ ಯಾವುದೇ ಅಪ್ರಮಾಣಿಕತೆ ಇಲ್ಲದೆ ಮತ್ತು ವಂಚನೆಯಿಲ್ಲದೆ ಇತರರೊಂದಿಗೆ ಪ್ರಾಮಾಣಿಕ ವಾದ ಸಂಬಂಧವನ್ನು ಹೊಂದಿರುತ್ತದೆ. ನಂಬಿಕೆಯುಳ್ಳ ವಿವೇಕವು ವೈಯಕ್ತಿಕವಾದ ಲಾಭಕ್ಕಾಗಿ ಯಾವುದೇ ಪಾತ್ರವನ್ನು ಅನುಸರಿಸುವದಿಲ್ಲ.

## ಮುಕ್ತಾಯ

ದೇವರ ರಾಜ್ಯದ ವಿಸ್ತರಣೆಯಲ್ಲಿ ಸತ್ಯವನ್ನು ನಾವು ಬೋಧಿಸುವಾಗ ನಾವುಗಳು ಕ್ರೈಸ್ತತ್ವದ ಆತ್ಮವನ್ನು ಹೊಂದಿರುವದು ಪ್ರಾಮುಖ್ಯವಾಗಿದೆ ಆದುದರಿಂದ ಯಾಕೋಬನು "ಸಮಾಧಾನಪಡಿಸುವವರು ಸಮಾಧಾನವೆಂಬ ಬೀಜವನ್ನ ಬಿತ್ತಿ ನೀತಿಯೆಂಬ ಫಲವನ್ನು ಕೊಯ್ಯುವರು" (3:18). ನಾವು ಏನಾಗಿದ್ದೇವೋ ಅದನ್ನೆ ಜೀವಿಸಬೇಕು, ನಾವು ಜೀವಿ ಸುವಂತದ್ದನ್ನೆ ತೋರಿಸಬೇಕು.

ಎಲ್ಲರೂ ಸಹ ಜ್ಞಾನಿಯ ವಿವೇಕವನ್ನು ಹೊಂದಲು ಅಸಾಧ್ಯ, ಆದರೆ ಎಲ್ಲರೂ ಯಾಕೋ ಬನು ವಿಶ್ಲೇಷಿಸಿದ ವಿವೇಕವನ್ನು ಹೊಂದಿಕೊಳ್ಳಲು ಸಾಧ್ಯವಿದೆ. ಇವೆಲ್ಲವೂ ದೇವರ ವರಗಳಾ ಗಿವೆ - ಕೇಳುವದರಿಂದ ಅವುಗಳು ದೊರಕುತ್ತವೆ.